3. ANNOUNCEMENT

The Chairman and Members of the Committee on Sub-ordinate Legislation, Meghalaya Legislative Assembly are witnessing the proceedings of the august House and on behalf of the Members I heartily welcome them.

4. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಿದ ಉತ್ತರ

ಗ್ರಾಮಗಳ ಅಭಿವೃದ್ಧಿ ಯೋಜನೆಗಳು

19(541); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು;

ಆ) ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರೆಷ್ಟು; ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು;

ಇ) ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಗುರಿ ತಲುಪಲು ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಒದಗಿಸುವುದು?

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಹಮ್ಮಿಕೊಂಡಿರುವ ಯೋಜನೆಗಳು ಕೆಳಕಂಡಂತಿವೆ.

1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
2	ಪಶ್ಚಿಮ ಘಟ್ಟಗಳ ಯೋಜನೆ
3	ಸ್ವಚ್ಛ ಭಾರತ ಅಭಿಯಾನ
4	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ
5	ಸುವರ್ಣ ಗ್ರಾಮೋದಯ / ಗ್ರಾಮ ವಿಕಾಸ ಯೋಜನೆ
6	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ
7	ಸಂಜೀವಿನಿ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ
8	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
9	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ
10	13ನೇ ಹಣಕಾಸು ಯೋಜನೆ
11	ಆರ್.ಐ.ಡಿ.ಎಫ್ – ನಬಾರ್ಡ್ – ರಸ್ತೆಗಳು
12	ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ

ಆ) ಮತ್ತು ಇ) ಬಹುತೇಕ ಗುರಿಗಳನ್ನು ತಲುಪಲಾಗಿದೆ.

ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಲ್ಲಿ ಪ್ರಯೋಜನ ಪಡೆದುಕೊಂಡಿರುವವರ, ಫಲಾನುಭವಿಗಳ ಆಯ್ಕೆ ಮಾಡುವಲ್ಲಿ ಅನುಸರಿಸುತ್ತಿರುವ ಮಾನದಂಡದ ವಿವರ ಹಾಗೂ ಗುರಿ ತಲುಪಲು ಕೈಗೊಂಡ ಕ್ರಮದ ವಿವರ ಅನುಬಂಧದಲ್ಲಿ ನೀಡಿದೆ.

ಅನುಬಂಧ							
ಕ್ರ. ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ಕಗದುಕೊಂಡ ಕ್ರಮದ ಮಾಹಿತಿ	
		2011-12	2012-13	2013-14			
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	1652116	1331967	1450457	1 ಗ್ರಾಮೀಣ ಪ್ರದೇಶದ ನಿವಾಸಿಯಾಗಿರಬೇಕು 2 ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಕುಟುಂಬದ ವಯಸ್ಕ ಸದಸ್ಯರಾಗಿರಬೇಕು. 3. ಅಕುಶಲ ಕೆಲಸ ಮಾಡಲು ಇಚ್ಚಿಸಿ ಈ ಯೋಜನೆಯಡಿ ಜಾಬ್ ಕಾರ್ಡ್ ಹೊಂದಿರತಕ್ಕದ್ದು.	ಈ ಯೋಜನೆಯು ಬೇಡಿಕೆಯಾಧಾರಿತ ಕಾರ್ಯಕ್ರಮವಾಗಿರುತ್ತದೆ. ಅಕುಶಲ ಕೆಲಸ ಬಯಸಿ ಅರ್ಜಿ ಸಲ್ಲಿಸುವ ಅರ್ಹ ಎಲ್ಲಾ ಕೂಲಿಕಾರ್ಮಿಕರಿಗೂ ನಿಗಧಿತ ಅವಧಿಯೊಳಗೆ ಕೂಲಿ ಉದ್ಯೋಗ ನೀಡಲಾಗುತ್ತಿದೆ. ನಿಗಧಿತ ಅವಧಿಯೊಳಗೆ ಕೂಲಿ ಕಾರ್ಮಿಕರಿಗೆ ಕೂಲಿ ಉದ್ಯೋಗ ಒದಗಿಸದಿದ್ದಲ್ಲಿ, ಕೂಲಿಕಾರ್ಮಿಕರು ಈ ಕಾಯ್ದೆಯನುಸಾರ ನಿರುದ್ಯೋಗ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಈ ಯೋಜನೆಯ ಸಮರ್ಪಕ ಮತ್ತು ಫಲಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳನ್ನು ಲಗತ್ತು-1ರಲ್ಲಿ ನೀಡಿದೆ	
2	ಪಶ್ಚಿಮ ಘಟ್ಟಗಳ ಯೋಜನೆ	3678	3208	4647	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ಗ್ರಾಮಸಭೆ / ಜಲಾನಯನ ಸಮಿತಿಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.	ಈ ಯೋಜನೆಯ ಗುರಿ ತಲುಪುವಲ್ಲಿ ಶೇಕಡಾ ನೂರರಷ್ಟು ಸಫಲವಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಯಾಗಿರುವ ಅನುದಾನ ಸಂಪೂರ್ಣ ವೆಚ್ಚವಾಗಿರುತ್ತದೆ.	

ಕ್ರ ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ತಗದುಕೊಂಡ ಕ್ರಮದ ಮಾಹಿತಿ
		2011-12	2012-13	2013-14		
3	ನಿರ್ಮಲ ಭಾರತ ಅಭಿಯಾನ	144782	296429	505517	ಕೇಂದ್ರ ಸರ್ಕಾರದ ನಿರ್ಮಲ ಭಾರತ ಅಭಿಯಾನ / ಸ್ವಚ್ಛ ಭಾರತ ಮಿಷನ್ ಯೋಜನೆಯ ಮಾರ್ಗಸೂಚಿಯಂತೆ ವೈಯುಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ ಪಡೆಯಲು ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು •ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಕುಟುಂಬಗಳು •ನಿರ್ಬಂಧಿತ ಎ.ಪಿ.ಎಲ್ ಕುಟುಂಬಗಳು: •ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ •ಕುಟುಂಬಗಳು. •ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳು. •ಮಹಿಳಾ ಮುಖ್ಯಸ್ಥ ಕುಟುಂಬಗಳು •ಭೂ-ರಹಿತ ಕಾರ್ಮಿಕ ಕುಟುಂಬಗಳು. •ಅಂಗವಿಕಲ ಸದಸ್ಯರಿರುವ ಕುಟುಂಬಗಳು	2013-14ರಲ್ಲಿ ಕೇಂದ್ರ ಸರ್ಕಾರ ನಿಗಧಿಪಡಿಸಿದ ಗುರಿಯನ್ನು ತಲುಪಲಾಗಿದೆ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಎಲ್ಲಾ ಕುಟುಂಬಗಳಿಗೆ ಪಾರದರ್ಶಕವಾಗಿ ಹಾಗೂ ತ್ವರಿತಗತಿಯಲ್ಲಿ ಗೃಹ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರವು ಕೆಳಕಂಡ ಕಾರ್ಯತಂತ್ರಗಳನ್ನು ರೂಪಿಸಿರುತ್ತದೆ. 1.ಶೌಚಾಲಯ ರಹಿತ ಹಾಗೂ ಶೌಚಾಲಯ ಹೊಂದಿರುವ ಕುಟುಂಬಗಳ ಬಗ್ಗೆ ಕುಟುಂಬವಾರು ಬೇಸ್‌ಲೈನ್ ಸಮೀಕ್ಷೆ ಮಾಡಿ ಫಲಾನುಭವಿವಾರು ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಅಳವಡಿಸಲಾಗಿದೆ. 2. ಗ್ರಾಮ ಪಂಚಾಯಿತಿಗಳಿಗೆ ಗುರಿಯನ್ನು ನಿಗಧಿಪಡಿಸಿ, ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಿ ಕ್ರಿಯಾಯೋಜನೆ ತಯಾರಿಸಿ ಸಲ್ಲಿಸಲು ಸೂಚಿಸಲಾಗಿದ್ದು, ಅದರಂತೆ 2014-15ನೇ ಸಾಲಿನಲ್ಲಿ 9 93ಲಕ್ಷ ವೈಯಕ್ತಿಕ ಶೌಚಾಲಯ ನಿರ್ಮಾಣದ ಗುರಿಯನ್ನು ಹೊಂದಲಾಗಿದೆ 3 ಶೌಚಾಲಯ ರಹಿತ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಕಾರ್ಯಾದೇಶಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ವಿತರಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಕ್ರಮವಹಿಸಿದೆ. 4 ಶೌಚಾಲಯಗಳನ್ನು ನಿರ್ಮಿಸಿಕೊಂಡ ನಂತರ ಫಲಾನುಭವಿಗಳ ಖಾತೆಗೆ RTGS ಮೂಲಕ ಪ್ರೋತ್ಸಾಹಧನವನ್ನು ಜಮೆ ಮಾಡಲಾಗುತ್ತಿದೆ 5 ಶೌಚಾಲಯ ನಿರ್ಮಿಸಿಕೊಂಡು ಪ್ರೋತ್ಸಾಹಧನ ಪಡೆದುಕೊಂಡಿರುವ ಫಲಾನುಭವಿಗಳ ವಿವರಗಳನ್ನು, ಕೇಂದ್ರ ಸರ್ಕಾರದ IMIS ನಲ್ಲಿ ಸಾರ್ವಜನಿಕರಿಗೆ

ಕ್ರ. ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ತಗೆದುಕೊಂಡ ಕ್ರಮದ ಮಾಹಿತಿ
		2011-12	2012-13	2013-14		
						ಮಾಹಿತಿ ಲಭ್ಯವಾಗುವಂತೆ ಆಯೋಜಿಸಲಾಗುತ್ತಿದೆ. 6. ಶೌಚಾಲಯಗಳನ್ನು ಪೂರ್ಣಗೊಳಿಸಿ ಬಳಸುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಸಾಮಾಜಿಕ ತಪಾಸಣೆಯನ್ನು ಮಾಡಲಾಗುತ್ತಿದೆ. 7. ಪ್ರತಿಮಾಹೆ ಸರ್ಕಾರದ ಉನ್ನತ ಅಧಿಕಾರಿಗಳಿಂದ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ **Sat.Com/VC** ಮೂಲಕ ಅಧಿಕಾರಿಗಳಿಗೆ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಪ್ರಗತಿ ಪರಿಶೀಲನೆ ಮಾಡುವ ಮೂಲಕ ಮಾಹಿತಿ ನೀಡಲಾಗುತ್ತಿದೆ. 8. ಸರ್ಕಾರದ ಸ್ಕೋಶ್ಲಾಹದನ ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಲು ವಿದ್ಯುನ್ಮಾನ ಹಣಕಾಸು ನಿರ್ವಹಣಾ ವ್ಯವಸ್ಥೆ (e-FMS) ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಮಳವಳ್ಳಿ ಹಾಗೂ ಜೀವಿಗಿ ತಾಲ್ಲೂಕಿನಲ್ಲಿ ಪ್ರಯೋಗಾತ್ಮಕವಾಗಿ ಅನುಷ್ಠಾನ ಮಾಡುತ್ತಿದ್ದು, ಈ ಪದ್ಧತಿಯನ್ನು ಶೀಘ್ರವಾಗಿ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿರುತ್ತದೆ.
4	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ	10531	11985	9700	ಜಾನುವಾರುಗಳ ಲಭ್ಯತೆ ಅನುಸಾರ ಗ್ರಾಮಸಭೆ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.	ನಿಗಧಿತ ಗುರಿ ಸಾಧಿಸಲಾಗಿದೆ.

ಕ್ರ. ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ತೆಗೆದುಕೊಂಡ ಕ್ರಮದ ಮಾಹಿತಿ
		2011-12	2012-13	2013-14		
೨	ಸುವರ್ಣ ಗ್ರಾಮೋದಯ / ಗ್ರಾಮ ವಿಕಾಸ ಯೋಜನೆ		೨೦೦೨		ಈ ಕಾರ್ಯಕ್ರಮವು ಫಲಾನುಭವಿ ಆಧರಿತ ಕಾರ್ಯಕ್ರಮವಲ್ಲ. ಬದಲಾಗಿ ಸುವರ್ಣ ಗ್ರಾಮೋದಯ ಯೋಜನೆಯಡಿ ರಾಜ್ಯದ ಮತ್ತು ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, 2001ರ ಜನಸಂಖ್ಯೆಯನ್ವಾಧರಿಸಿ ರೂ.1000.00 ಕೋಟಿ ಅನುದಾನದಲ್ಲಿ ತಲಾನುದಾನ ರೂ 2500/- ರಂತೆ ಒಟ್ಟು 40,00,000 (ನಲವತ್ತು ಲಕ್ಷ) ಗ್ರಾಮೀಣ ಜನಸಂಖ್ಯೆಯ 1000 ಗ್ರಾಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯ್ಕೆ ಮಾಡಲು ಮಾನದಂಡವನ್ನು ನಿಗಧಪಡಿಸಲಾಗಿರುತ್ತದೆ	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ವಿಫಲವಾಗಿರುವುದಿಲ್ಲ.

ಕ್ರ ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ತೆಗೆದುಕೊಂಡ ಕ್ರಮದ ಮಾಹಿತಿ
		2011-12	2012-13	2013-14		
6	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (ಕೇಂದ್ರ & ರಾಜ್ಯ)	1,15,05,642	1,48,20,038	1,73,35,853	ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಆದ್ಯತೆಯನ್ನು ನಿಗದಿಗೊಳಿಸಿದ್ದು, ಅದರಂತೆ ಗುಣಮಟ್ಟಕಾವಿತ ಗ್ರಾಮಗಳು ಹಾಗೂ ಭಾಗಶಃ ಆವರಿಸಲ್ಪಟ್ಟ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಗಳನ್ನು ರೂಪಿಸಲಾಗುತ್ತಿದೆ.	ನಿರ್ದಿಷ್ಟ ಗುರಿ ಸಾಧಿಸಲಾಗಿದೆ.

7	ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್	70762	59036	124399	ಮಾನದಂಡದ ವಿವರ ಲಗತ್ತು-2ರಲ್ಲಿ ನೀಡಿದೆ.	ಸಂಜೀವಿನಿ- ಕೆಎಸ್ಆರ್ಎಲ್ಪಿಎಸ್ ಯೋಜನೆಯನ್ನು ಹೊಸದಾಗಿ 2012-13ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಪ್ರಸ್ತುತ ಅನುಷ್ಠಾನದ ಹಂತದಲ್ಲಿರುತ್ತದೆ.	
8	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನ	ಕಳೆದ 3 ವರ್ಷಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 1159 ಜನವಸತಿ ಪ್ರದೇಶಗಳು ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಿಂದ 3741 ಜನವಸತಿ ಪ್ರದೇಶಗಳು ಪ್ರಯೋಜನ ಪಡೆದುಕೊಂಡಿವೆ.			ಈ ಕಾರ್ಯಕ್ರಮದಡಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಮಾರ್ಗಸೂಚಿಯನ್ವಯ ಜಿಲ್ಲಾ ಗ್ರಾಮೀಣ ರಸ್ತೆ ಯೋಜನೆ (ಡಿಆರ್ಆರ್ಪಿ) ರಸ್ತೆಗಳನ್ನು ಗ್ರೋಪ್ ನಂಬರ್ಗಳ ಯುಟಿಲಿಟಿ ವ್ಯಾಲ್ಯೂ ಆಧಾರದ ಮೇಲೆ ರಸ್ತೆಗಳ ಆದ್ಯತಾ ಪಟ್ಟಿಗಳನ್ನು ತಯಾರಿಸಲಾಗುವುದು. ಈ ಪಟ್ಟಿಯಿಂದ ರಸ್ತೆಗಳನ್ನು ಆಯ್ಕೆ ಮಾಡಲಾಗುತ್ತದೆ.	ನಿಗಧಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ.	
9	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನ						

ಕ್ರ. ಸಂ	ಯೋಜನೆಗಳು	ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರ ಸಂಖ್ಯೆ			ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು	ಈ ಯೋಜನೆಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ತೆಗೆದುಕೊಂಡ ಕ್ರಮದ ಮಾಹಿತಿ
		2011-12	2012-13	2013-14		
10	13ನೇ ಹಣಕಾಸು ಯೋಜನೆ	ಈ ಯೋಜನೆಗಳಡಿ ಗ್ರಾಮೀಣ ರಸ್ತೆಗಳ ನಿರ್ಮಾಣ/ಅಭಿವೃದ್ಧಿ ಮಾಡುತ್ತಿದ್ದು, ಫಲಾನುಭವಿಗಳನ್ನು ಆಯ್ಕೆ ಮಾಡಿ ಪ್ರತ್ಯೇಕವಾಗಿ ಗುರುತಿಸಲಾಗುವುದಿಲ್ಲ. ಆದರೆ ಈ ಕಾರ್ಯಕ್ರಮದಲ್ಲಿ ಅಭಿವೃದ್ಧಿಪಡಿಸುವ ರಸ್ತೆಗಳಿಂದ ಎಲ್ಲಾ ಗ್ರಾಮೀಣ ಜನತೆಗೆ ರಸ್ತೆ ಸಂಪರ್ಕದ ವ್ಯವಸ್ಥೆ ಒದಗಿಸಲಾಗುತ್ತಿದ್ದು, ಎಲ್ಲಾ ಗ್ರಾಮೀಣ ಜನತೆಯು ಫಲಾನುಭವಿಗಳಾಗುತ್ತಾರೆ.			ಈ ಕಾರ್ಯಕ್ರಮಗಳಲ್ಲಿ ರಸ್ತೆಗಳನ್ನು ಜಿಲ್ಲಾ ಗ್ರಾಮೀಣ ರಸ್ತೆ ಯೋಜನೆ (ಡಿಆರ್‌ಆರ್‌ಪಿ) ಪಟ್ಟಿಯಿಂದ ಆಯ್ಕೆ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ.	ನಿಗಧಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ
11	ಆರ್ ಐಡಿ ಎಫ್ - ನಬಾರ್ಡ್-20 ರಸ್ತೆ					
12	ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ					

ಅಗತ್ಯ ಮಾಹಿತಿ

ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:541

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳು

*****

* ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಕುಶಲ ಕೂಲಿಕಾರ್ಮಿಕರ ಕೂಲಿ ಪಾವತಿಯನ್ನು ಮತ್ತು ಸಾಮಗ್ರಿಗಳ ವೆಚ್ಚವನ್ನು e-FMS ಮುಖಾಂತರ ನಿರ್ವಹಿಸಲಾಗುತ್ತಿದೆ.

* ಇತರೆ ಯೋಜನೆಯ ಕಾರ್ಯಕ್ರಮಗಳನ್ನು ಈ ಯೋಜನೆಯೊಂದಿಗೆ ಒಗ್ಗೂಡಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

* ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಕಾರ್ಯಸೂಚಿಗಳನ್ವಯ ಕಾಯಕ ಬಂಧುಗಳನ್ನು ನೇಮಿಸಲಾಗಿರುತ್ತದೆ.

* ಯೋಜನೆಯ ಸೌಲಭ್ಯಗಳ ಮಾಹಿತಿ ಪಡೆಯುವ ಬಗ್ಗೆ, ಉದ್ಯೋಗ ಚೀಟಿ, ಉದ್ಯೋಗ ಬೇಡಿಕೆ, ಕುಂದು ಕೊರತೆಗಳನ್ನು ಸಲ್ಲಿಸಲು ಅನುವಾಗುವಂತೆ ಸಾರ್ವಜನಿಕರು ಉಚಿತ ಸಹಾಯವಾಣಿ 1(800 425 8666) ಮೂಲಕ ಪಡೆದುಕೊಳ್ಳಲು ಕಾಲ್ ಸೆಂಟರ್‌ನ್ನು ಪ್ರಾರಂಭಿಸಲಾಗಿರುತ್ತದೆ.

* ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಸ್ವೀಕರಿಸಲಾಗುವ ದೂರುಗಳನ್ನು ಪರಿಗಣಿಸಿ ವಿಲೇಗೊಳಿಸಲು ಜಿಲ್ಲೆಗಳಲ್ಲಿ ಒಂಬುಡ್ಸ್‌ಮನ್‌ಗಳನ್ನು ನೇಮಿಸಲಾಗಿರುತ್ತದೆ.

* ಈ ಯೋಜನೆಯಡಿ ಕಾಮಗಾರಿಗಳ ಗುಣ ಮಟ್ಟ ಪರಿಶೀಲನೆಗಾಗಿ ರಾಜ್ಯ ಗುಣ ನಿಯಂತ್ರಣ ಮಾನಿಟರ್‌ಗಳನ್ನು ಹಾಗೂ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳನ್ನು ಎಂಪ್ಯಾನಲ್ ಮಾಡಲಾಗಿದ್ದು, ಅವರಿಂದ ಯೋಜನೆಯ ಕಾಮಗಾರಿಗಳನ್ನು ಪರಿಶೀಲನೆ ಮಾಡಿಸಿ, ವರದಿಗಳನ್ನು ಪಡೆದುಕೊಂಡು ಸೂಕ್ತ ಕ್ರಮವಹಿಸಲಾಗುತ್ತಿದೆ

* ದೂರುಗಳ ವಿಲೇವಾರಿಯ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

* ಯೋಜನೆಯ ಬಗ್ಗೆ ಸಾಮೂಹಿಕ ತಿಳುವಳಿಕೆಗೆ ಪ್ರೋತ್ಸಾಹ ನೀಡುವ ಪಾರದರ್ಶಕತೆಗಾಗಿ ಗ್ರಾಮ ಸಭೆಗಳ ಮುಖಾಂತರ ಸಾಮಾಜಿಕ ಪರಿಶೋಧನೆಯನ್ನು ಕೈಗೊಳ್ಳಲಾಗುತ್ತಿದ್ದು, ರಾಜ್ಯ ಮಟ್ಟದಲ್ಲಿ ಪ್ರತ್ಯೇಕವಾದ ಸಾಮಾಜಿಕ ಪರಿಶೋಧನ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ

* ಯೋಜನೆಯ ಪರಿಣಾಮಕಾರಿ ಅನುಷ್ಠಾನ ದೃಷ್ಟಿಯಿಂದ ಖಾಲಿ ಹುದ್ದೆಗಳಿಗೆ KTPP ನಿಯಮಗಳ ಅನ್ವಯ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸಿಬ್ಬಂದಿ ಸೇವೆಗಳನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ.

* ಯೋಜನೆಯ ಕುರಿತು ಅರಿವು ಮೂಡಿಸುವ ಹಾಗೂ ಪ್ರಚಾರ ಮಾಡುವ ಉದ್ದೇಶಕ್ಕಾಗಿ ಕಲಾಜಾಥ ಕಾರ್ಯಕ್ರಮಗಳು, ಆಕಾಶವಾಣಿ, ದೂರದರ್ಶನ ಹಾಗೂ ದಿನಪತ್ರಿಕೆಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ

* ಯೋಜನೆಯ ಅನುಷ್ಠಾನದ ಪಾರದರ್ಶಕತೆಯ ದೃಷ್ಟಿಯಿಂದ ಎಲ್ಲಾ ವಿವರಗಳನ್ನು ಯೋಜನೆಯ ಅಧಿಕೃತ ಅಂತರ್ಜಾಲದಲ್ಲಿ (www.nrega.nic.in) ಸಾರ್ವಜನಿಕರಿಗಾಗಿ ಅಳವಡಿಸಲಾಗಿರುತ್ತದೆ.

ಲಗತ್ತು – ೨

ಎನ್‌ಆರ್‌ಎಲ್‌ಎಂ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು

1. ರಾಜೀವ್‌ಗಾಂಧಿ ಜೈತನ್ಯ ಯೋಜನೆ

ಫಲಾನುಭವಿಗಳ ಆಯ್ಕೆಯ ಮಾನದಂಡಗಳು:

- 18 ರಿಂದ 35 ವರ್ಷದವರೆಗಿನ ವಯೋಮಾನದ ಯುವಜನರಿಗಷ್ಟೇ ಮೀಸಲಾಗಿರುತ್ತದೆ.
- ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು. (ಶಾಲೆಯ ಮುಖ್ಯಸ್ಥರಿಂದ ಸೂಕ್ತ ದಾಖಲಾತಿ ಒದಗಿಸುವುದು.)
- ಗ್ರಾಮಪಂಚಾಯತ್‌ನ ವ್ಯಾಪ್ತಿಯಲ್ಲಿ ವಾಸಿಸುವ ಅಭ್ಯರ್ಥಿಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ. ಗ್ರಾಮ ಸಭೆಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು
- ಮಹಿಳೆಯರಿಗೆ ಆಧ್ಯತೆ ನೀಡಲಾಗುವುದು.
- ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳಂತೆ ಕನಿಷ್ಠ ಶೇ20% ಪರಿಶಿಷ್ಟ ಜಾತಿ ಹಾಗು ಶೇ9% ಪರಿಶಿಷ್ಟ ಪಂಗಡದ ಯುವಜನರನ್ನು ಆಯ್ಕೆ ಮಾಡಿಕೊಳ್ಳುವುದು.
- ಅಲ್ಪ ಸಂಖ್ಯಾತರಿಗೆ ಆದ್ಯತೆ
- ಈ ಕೆಳಕಂಡ ಫಲಾನುಭವಿಗಳು ಸ್ವಯಂ ಸೇರ್ಪಡೆ (**Auto inclusion**) ಹೊಂದುವರು. ಇವರಿಗೆ ಗ್ರಾಮ ಸಭೆಯ ಆಯ್ಕೆ ಕಡ್ಡಾಯವಾಗಿರುವುದಿಲ್ಲ

1. ವಿಕಲಚೇತನರು
2. ಬುಡಕಟ್ಟು ಜನಾಂಗದ ಯುವಜನರು
3. ಲೈಂಗಿಕ ಶೋಷಣೆಗೊಳಗಾದ ಮಹಿಳೆಯರು.
4. ವಿಧವೆಯರು.
5. ಪರಿತ್ಯಕ್ತ ಮಹಿಳೆಯರು.
6. ಮಂಗಳಮುಖಿಯರು (ಟ್ರಾನ್ಸ್‌ಜೆಂಡರ್).
7. ಜಿಡುಗಡೆಗೊಂಡ ಎಲ್ಲಾ ಜೀತ ವಿಮುಕ್ತರು.
8. ಎಂಜಿಎನ್‌ಆರ್‌ಇಜಿಎ ಯಡಿ 100 ದಿನ ಉದ್ಯೋಗ ಪೂರೈಸಿದ ಯುವಜನರು.

ವಿ.ಸೂ : ಜೀತವಿಮುಕ್ತರು ವಯೋಮಿತಿ ಮೀರಿದ್ದಲ್ಲಿ ಅವರ ಅರ್ಹ ಮಕ್ಕಳು

2. ಆರ್‌ಸೆಟಿ/ರೂಡ್‌ಸೆಟಿ (ತರಬೇತಿ ಕಾರ್ಯಕ್ರಮ) ಕಾರ್ಯಕ್ರಮ

1 ಬಡತನ ರೇಖೆಗಿಂತ ಕೆಳಗಿರುವ ಅಭ್ಯರ್ಥಿಗಳು.

2 ಶೇ.50 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಶೇ.15 ರಷ್ಟು ಅಲ್ಪಸಂಖ್ಯಾತರು ಹಾಗೂ ಶೇ.3 ರಷ್ಟು ವಿಕಲಚೇತನರು ಇರತಕ್ಕದ್ದು.

3 ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ಕೈಗೊಳ್ಳಲು ಆಯ್ಕೆಯಾದ ಫಲಾನುಭವಿಗಳಿಗೆ ತರಬೇತಿ ವೆಚ್ಚ ಪ್ರತಿ ದಿನಕ್ಕೆ, ಪ್ರತಿ ಅಭ್ಯರ್ಥಿಗೆ-ರೂ.200/-ರಂತೆ, 4 ವಾರಗಳ ತರಬೇತಿಯಾದಲ್ಲಿ ಗರಿಷ್ಠ ರೂ.4000/- 4 ವಾರಗಳು ಮೀರಿದ್ದಲ್ಲಿ (ದೀರ್ಘಾವಧಿ ತರಬೇತಿಗೆ) ಗರಿಷ್ಠ ರೂ 5000/-ಗಳನ್ನು ನೀಡಲಾಗುವುದು.

೩ ಬಡ್ಡಿ ಸಹಾಯಧನ ಕಾರ್ಯಕ್ರಮ

ಒಂದು ಲಕ್ಷ ಅರ್ಹ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಬಡ್ಡಿ ಸಹಾಯಧನ ನೀಡಲು ನಿಯತವಾಗಿ ಸಾಲ ಮರುಪಾವತಿ ಮಾಡಿದಂತಹ ಸ್ವ-ಸಹಾಯ ಗುಂಪುಗಳನ್ನು ಆಯ್ಕೆ ಮಾಡುವ ಸಲುವಾಗಿ 26 ಜಿಲ್ಲೆಗಳ (ಮೈಸೂರು, ತುಮಕೂರು, ಗದಗ ಮತ್ತು ಕೊಪ್ಪಳ ಹೊರತುಪಡಿಸಿ) ಕೆಳಕಂಡ ಮಾಹಿತಿಯನ್ನು ಎಸ್ ಎಲ್ ಬಿ ಸಿ ಸಂಗ್ರಹಿಸುವುದು

1 ಎಲ್ಲಾ ಎನ್.ಆರ್.ಎಲ್.ಎಂ ವಿಧೇಯ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ದಿನಾಂಕ: 31.03.2013ರಂದು ಬಾಕಿ ಇರುವ ಸಾಲ ಮತ್ತು ನಿಯತಕಾಲಿಕ ಕಂತುಗಳಲ್ಲಿ ಸಾಲ ಮರುಪಾವತಿ ಮಾಡುತ್ತಿದ್ದು ಹಾಗೂ 2013-14ನೇ ಸಾಲಿನಲ್ಲಿ ಸಾಲ ಮುಂದುವರಿಯುತ್ತಿದ್ದಲ್ಲಿ, ಅಂತಹ ಸ್ವ-ಸಹಾಯ ಗುಂಪುಗಳನ್ನು ಪರಿಗಣಿಸಲಾಗುವುದು.

2 ಎಲ್ಲಾ ಎನ್.ಆರ್.ಎಲ್.ಎಂ ವಿಧೇಯ ಮಹಿಳಾ ಸ್ವ-ಸಹಾಯ ಗುಂಪುಗಳು ಕಳೆದ ವರ್ಷ ನೀಡಿದ ಸಿ ಸಿ ಎಲ್.(ನಗದು ಸಾಲದ ಮಿತಿ) ಸೌಲಭ್ಯವನ್ನು ಪಡೆದಿದ್ದು ನಗದು ಸಾಲದ ಮೇಲಿನ ಬಡ್ಡಿಯನ್ನು ನಿಯತವಾಗಿ ಮರುಪಾವತಿ ಮಾಡುತ್ತಿದ್ದಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ಈ ಸೌಲಭ್ಯವನ್ನು ನವೀಕರಿಸಿದ್ದಲ್ಲಿ/ಜಾಸ್ತಿಮಾಡಿದ್ದಲ್ಲಿ.

3. ಎಲ್ಲಾ ಎನ್.ಆರ್.ಎಲ್.ಎಂ ವಿಧೇಯ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಅವಧಿ ಸಾಲ/ಸಿ ಸಿ ಎಲ್.(ನಗದು ಸಾಲದ ಮಿತಿ) ಸೌಲಭ್ಯವನ್ನು ಸದರಿ ಸಾಲಿನಲ್ಲಿ ಅಂದರೆ 01.04.2013 ರಿಂದ ಈವರೆಗೆ ಪಡೆದ ಸಾಲವನ್ನು ನಿಯತವಾಗಿ ಮರುಪಾವತಿ/ಸೇಪಾಯುಕ್ತ (ಜಚಿತಾಭಜು) ಸಾಲ ಪಡೆದ ಸ್ವ-ಸಹಾಯ ಗುಂಪುಗಳಿಗೆ

ಮೇಲ್ಕಂಡ ವಿಧಾನವು ಒಂದು ಲಕ್ಷ ಸ್ವ-ಸಹಾಯ ಗುಂಪುಗಳ ಆಯ್ಕೆಗೆ ಸೀಮಿತವಾಗಿರುತ್ತದೆ. ಉಳಿದ ಸ್ವ-ಸಹಾಯ ಗುಂಪುಗಳಿಗೆ ಈ ಸೌಲಭ್ಯ ನೀಡುವ ಬಗ್ಗೆ 2014-15ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ನಿರ್ದೇಶನವನ್ನು ಗಣನೆಗೆ ತೆಗೆದುಕೊಂಡು ತೀರ್ಮಾನ ಕೈಗೊಳ್ಳಲಾಗುವುದು

4. ದೀನ ದಯಾಳ್-ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ

1. ಜಾಬ್ ಮೇಳಾ, ಉಪಗ್ರಹ ಆಧಾರಿತ ಪ್ರೇರಣ ಕಾರ್ಯಕ್ರಮ ಹಾಗೂ ಗ್ರಾಮಗಳಿಗೆ ಬೇಟಿ ನೀಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.
2. 18 ರಿಂದ 35 ವರ್ಷ ವಯಸ್ಸಿನ ಯುವಜನಗಳಿತೆ. ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರು, ವಿಕಲ ಚೇತನರು ಮತ್ತು ಹಿಂದುಳಿದ ವರ್ಗದ ಬಡ ಗ್ರಾಮೀಣ ಯುವ ಜನರು ಈ ಕಾರ್ಯಕ್ರಮದ ಫಲಾನುಭವಿಗಳಾಗುವರು

೫ ಸುತ್ತುನಿಧಿ ಕಾರ್ಯಕ್ರಮ

1. ಪಂಚ ಸೂತ್ರಗಳನ್ನು ಅನುಸರಣೆ ಮಾಡುತ್ತಿರುವ ಗುಂಪುಗಳಿಗೆ ಸುತ್ತುನಿಧಿ ಮಂಜೂರು ಮಾಡುವುದು

ಪಂಚಸೂತ್ರವೆಂದರೆ: ನಿರಂತರವಾಗಿ ಸಭೆಗಳನ್ನು ಮಾಡುವುದು, ನಿಯಮಿತ ಉಳತಾಯ ಮ್ಮಾಡುವುದು, ನಿಯಮಿತವಾಗಿ ಸಾಲ ನೀಡುವುದು, ನಿರಂತರವಾಗಿ ಸಾಲ ಮತ್ತು ಬಡ್ಡಿ ಮರುಪಾವತಿ ಮಾಡುವುದು ಮತ್ತು ನಿರಂತರವಾಗಿ ಪುಸ್ತಕ ನಿರ್ವಹಣೆಮಾಡುವುದಾಗಿದೆ

2 ಅರ್ಹ ಗುಂಪು ಶೇ 70ಕ್ಕೂ ಅಧಿಕ ಬಡವರ್ಗದ ಸದಸ್ಯರುಗಳನ್ನು ಹೊಂದಿರಬೇಕು

3 ಗುಂಪುಗಳ ಜೇಷ್ಟತೆಯ ಆಧಾರದ ಮೇಲೆ ಸುತ್ತುನಿಧಿ ನೀಡುವುದು

4. ಗುರುತಿಸುವ ಅರ್ಹ ಗುಂಪುಗಳಲ್ಲಿ ಶೇ 35ರಷ್ಟು ಪ.ಜಾ, ಶೇ 15 ರಷ್ಟು ಪ.ಪಂ, ಶೇ 15 ರಷ್ಟು ಅಲ್ಪಸಂಖ್ಯಾತ ಮತ್ತು ಶೇ 3 ರಷ್ಟು ವಿಶೇಷಚೇತನರ ಗುಂಪುಗಳಿಗೆ ಆದ್ಯತೆ ನೀಡುವುದು

6. <u>ಮಹಿಳಾ ಕಿಸಾನ್ ಸಶಕ್ತಿಕರಣ</u>

1 ಈ ಯೋಜನೆಯು ಮಹಿಳಾ ರೈತರಿಗಳಿಗೆ ಮಾತ್ರ

2. ಶೇ.50 ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರಾಗಿರಬೇಕು.

3 ಬಡವ ಮತ್ತು ಕಡುಬಡವರಾಗಿರಬೇಕು.

4. ಮಹಿಳಾ ಸ್ವ-ಸಹಾಯ ಗುಂಪಿನ ಸದಸ್ಯರಾಗಿರಬೇಕು/ಸದಸ್ಯರಾಗಬೇಕು.

5. ಕೃಷಿ ಚಟುವಟಿಕೆಗಳಲ್ಲಿ ತೊಡಗಿರಬೇಕು

7 <u>ಸಂಜೀವಿನಿ ಕಲ್ಪವೃಕ್ಷ ಸ್ನೇಹಿತರ ತರಬೇತಿ (FOCT)</u>

1 ಫಲಾನುಭವಿಗಳ ವಯಸ್ಸು 18 ರಿಂದ 35 ವರ್ಷದೊಳಗಿರಬೇಕು

2 ತೆಂಗಿನ ಮರವನ್ನು ಏರಲು ದೈಹಿಕವಾಗಿ ಸಧೃಡವಾಗಿರಬೇಕು.

3 ಒಂದು ಗ್ರಾಮದಿಂದ 2 ರಿಂದ 3 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡುವುದು

4. ತೆಂಗು ಅಭಿವೃದ್ಧಿ ಮಂಡಳ ಮತ್ತು ಸಂಜೀವಿನಿ ಯಡಿ ಈಗಾಗಲೇ ತರಬೇತಿ ಪಡೆದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತಿಲ್ಲ

5. 5 ದಿನಗಳ ವಸತಿಯುತ (Residential Training) ತರಬೇತಿಗೆ ಹಾಜರಾಗಲು ಸಿದ್ದರಿರಬೇಕು.

6. ತರಬೇತಿ ಪಡೆದ ನಂತರ ಫಲಾನುಭವಿಯು ತವರು ಜಿಲ್ಲೆ ಅಥವಾ ರಾಜ್ಯದ ಇತರೆ ಜಿಲ್ಲೆಗಳ ಬೇರೆ ಬೇರೆ ಊರುಗಳಿಗೆ ಸಂಚಾರ ಮಾಡಲು ಸಿದ್ದರಿರಬೇಕು

7 ತರಬೇತಿ ಪಡೆದು ಕನಿಷ್ಟ 5 ವರ್ಷಗಳ ಕಾಲವಾದರು ತೆಂಗಿನ ಮರ ಏರುವ ಕೌಶಲ್ಯದೊಂದಿಗೆ ಸ್ವಯಂ ಉದ್ಯೋಗವನ್ನು ಪ್ರಾರಂಭಿಸುವಂತಿರಬೇಕು

8. ಫಲಾನುಭವಿಯು ಮೂರ್ಛೆ (ಪಿಟ್ಸ್) ಅಥವಾ ಹೃದಯ ಸಂಬಂಧಿ ರೋಗದಿಂದ ಹೊರತಾಗಿರಬೇಕು.

9. ಮರ ಏರುವಲ್ಲಿ ಯಾವುದೇ ಸಂಕೋಚ ಅಥವಾ ಭಯದಿಂದ ಕೂಡಿರಬಾರದು.

10. ಮರ ಏರುವ ಸಂದರ್ಭದಲ್ಲಿ ಸೂಕ್ತ ಉಡುಪು ಧರಿಸಲು ಸಿದ್ದರಿರಬೇಕು.

11 ಅಗತ್ಯವಿದ್ದ ಕಡೆ ತರಬೇತುದಾರರ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಲು ಸಿದ್ದರಿರಬೇಕು.

12. ಕನಿಷ್ಠ 50 ರಷ್ಟು ಪರಿಶಿಷ್ಟ ಜಾತಿ(25%), ಪರಿಶಿಷ್ಟ ಪಂಗಡ(10%) ಮತ್ತು ಅಲ್ಪಸಂಖ್ಯಾತ(15%) ಸಮುದಾಯದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು.

*****

ಶ್ರೀ ಆರ್. ಜಗದೀಶ್ ಕುಮಾರ್ (ಹೆಬ್ಬಾಳ):– ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಲ್ಲಿ ಈ ಎಲ್ಲ ಯೋಜನೆಗಳ ಪ್ರಯೋಜನ ಪಡೆದುಕೊಂಡಿರುವವರು ಎಷ್ಟು? ಹಾಗೂ ಎಲ್ಲಾ ಗುರಿಗಳನ್ನು ಸಾಧಿಸಲಾಗಿದೆಯೇ? ಎಂಬ ಪ್ರಶ್ನೆಗೆ ಬಹುತೇಕ ಗುರಿಗಳನ್ನು ಸಾಧಿಸಲಾಗಿದೆಯೆಂದು ಹೇಳಿದ್ದಾರೆ. ಈ ಪ್ರಶ್ನೆಯನ್ನು ಏಕೆ ಕೇಳಿದ್ದೇನೆಂದರೆ, ಬಜೆಟ್ ಬರುವಂಥ ವಿಚಾರದಲ್ಲಿ ಹಳೆಯ ಸರ್ಕಾರವಿದ್ದಾಗ ಗುರಿ ಸಾಧಿಸಿರಲಿಲ್ಲವೆಂದು ಹೇಳುತ್ತಾರೆ, ಅದಕ್ಕೆ ಈಗ ಸಾಧಿಸಿದ್ದೇವೆಂದು ಹೇಳಿದ್ದಾರೆ. ನಾನು ಒಂದೇ ಒಂದು ವಿಚಾರವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ಕೇಳಲಿಚ್ಛಿಸುತ್ತೇನೆ. ರೈತರ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಲು ಕಾರ್ಯಾದೇಶ ಕೊಡುವ ಬಗ್ಗೆ, ಅಲ್ಲಿ ಏನಾಗಿದೆಯೆಂದರೆ, ಬರೀ ಬಿ.ಪಿ.ಎಲ್. ಕಾರ್ಡ್ ಇರುವವರಿಗೆ ಮಾತ್ರ ಶೌಚಾಲಯವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಎ.ಪಿ.ಎಲ್. ಕಾರ್ಡ್ ಇದ್ದರೂ ಸಹ ಅವರಲ್ಲೂ ಶೌಚಾಲಯವಿಲ್ಲದೇ ಇರುವವರಿದ್ದಾರೆ. ತಾವು ಅವರಿಗೂ ಸಹ ಆ benefit ಕೊಡುವುದಕ್ಕೆ ಏನಾದರೂ ಒಂದು ಆದೇಶ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಗೌರವಾನ್ವಿತ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ಈಗ ಶೌಚಾಲಯವನ್ನು ಏನು ಮಂಜೂರು ಮಾಡುತ್ತೇವೆ, ಕಾರ್ಯಾದೇಶವನ್ನು ಕೊಡುತ್ತಿದ್ದೇವೆ, ನಾವು ಅದರಲ್ಲಿ ಯಾವ ರೀತಿಯ discrimination ಮಾಡುತ್ತಿಲ್ಲ. ನಾವು ಯಾರ್ಯಾರೆಂಬುದನ್ನು ಪಟ್ಟಿ ಮಾಡಿದ್ದೇವೆ ಅದು ಬಿ.ಪಿ.ಎಲ್.ಗೆಂದು ಅಲ್ಲ, ಬೇರೆ ಬೇರೆಯಾದಂಥ ಅರ್ಹತೆಯನ್ನು ಆಧರಿಸಿ ಅವರಿಗೆ ಮಂಜೂರಾತಿಯನ್ನು ಕೊಡುತ್ತೇವೆ ಮತ್ತು ಕಾರ್ಯಾದೇಶವನ್ನು ಕೊಡುತ್ತಿದ್ದೇವೆ.

ಅಧ್ಯಕ್ಷರು:– ಒಂದು ವಿಷಯವೇನೆಂದರೆ ಶೌಚಾಲಯಕ್ಕೆ ಕೊಡಬೇಕಾದ ಹಣ ಬಾಕಿ ಇದೆ, ಅದು ಬಿಡುಗಡೆಯಾಗಿಲ್ಲ. ಅಲ್ಲಿ ಜನರು ಒದ್ದಾಡುತ್ತಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದ ಸ್ವಲ್ಪ ತೊಂದರೆಯಾಗಿದೆ, ಇನ್ನು ಒಂದು ವಾರದಲ್ಲಿ ಅದನ್ನು ಸರಿಪಡಿಸುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಮೊದಲು "ನಿರ್ಮಲ್ ಭಾರತ್ ಅಭಿಯಾನ" ಇತ್ತು, ಅದನ್ನು ಏಕಾಏಕಿ ಸ್ಥಗಿತಗೊಳಿಸಿ, "ಸ್ವಚ್ಛ ಭಾರತ್ ಮಿಷನ್" ಎಂದು ತಂದರು. ಈ ನಿರ್ಮಲ್ ಭಾರತ್ ಅಭಿಯಾನದಲ್ಲಿ ಯಾರು ಅರ್ಧಂಬರ್ಧ ಕೆಲಸವನ್ನು ಮಾಡಿದ್ದರು, ಅವರದ್ದೆಲ್ಲಾ ಕೆಲಸ ಆಗಿ ಹೋಗಿದೆಯೆಂದು ಬರೆದು ಕಳುಹಿಸಿದ್ದಾರೆ. ಈ ಸಮೀಕ್ಷೆಯನ್ನು ಮಾಡುವಾಗ ಅಂಗನವಾಡಿ ಕಾರ್ಯಕರ್ತೆಯರು ಇದ್ದರು. ಅವರಿಗೆ NBA stop ಆಗಿ ದುಡ್ಡು ಬರಲಿಲ್ಲ, ಅವರು SBM ಗೆ ಸೇರಲಿಲ್ಲ. ಅದನ್ನು ಯಾವ ರೀತಿಯಲ್ಲಿ ತೀರ್ಮಾನ ಮಾಡುತ್ತಾರೆಂಬುದು ಗೊತ್ತಿಲ್ಲ. ಮಾನ್ಯ ಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, ಈ SBMನಲ್ಲೂ ಕೂಡ ಸುಮಾರು ಕಡೆಗಳಲ್ಲಿ ಕೆಲಸ ಮಾಡಿದ್ದಾರೆ, ಹಣವೇ ಬಿಡುಗಡೆಯಾಗಿಲ್ಲ. ನಾನು ಕಳೆದ ತಿಂಗಳು 27ನೇ ತಾರೀಖು review ಮಾಡಿದೆ, 37 ಪಂಚಾಯಿತಿಗಳ ಪೈಕಿ ಒಂದೇ ಒಂದು ಆಗಿಲ್ಲ. ತಮ್ಮನ್ನು ಆಫೀಸರ್ಸ್ ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರು observation ಅನ್ನು ಮಾರ್ಮಿಕವಾಗಿ ಮಾಡಿದರು. I think ವಾಸ್ತವಾಂಶಕ್ಕೂ ತಮಗೆ ಬರುತ್ತಿರುವಂಥ ಮಾಹಿತಿಗೂ ಬಹಳ ದೊಡ್ಡ ಅಂತರವಿದೆ. It is a very important programme. Kindly verify all the information that is coming to you from your officers.

ಅಧ್ಯಕ್ಷರು:– ಮಾನ್ಯ ಮಂತ್ರಿಗಳೇ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಹಿರಿಯರಾದಂಥ ಸನ್ಮಾನ್ಯ ರಮೇಶ್‌ಕುಮಾರ್‌ರವರು ಒಂದು ಮಾಹಿತಿಯನ್ನು ಕೊಟ್ಟರು. ಅವರು specific ಆಗಿ ಹೇಳಿದರೆ, ನಾನು ತಕ್ಷಣ ಆ ಮಾಹಿತಿಗಳನ್ನೆಲ್ಲಾ ತರಿಸಿಕೊಳ್ಳುತ್ತೇನೆ. ಅದರ ಜೊತೆಗೆ ಬಾಕಿ ಏನು ಇದೆ, ಬಾಕಿ ಕೊಡುವಂಥದ್ದು ಏನು ಇದೆ, ಅದಕ್ಕೆ "ಹಣ ಪಾವತಿ ಅಭಿಯಾನ" ಎಂದು ಮಾಡುವುದರ ಮೂಲಕ ನಾವು ಬಹುತೇಕ ಶೌಚಾಲಯಗಳ ಬಾಕಿ ಹಣ 4 ತಿಂಗಳು, 6 ತಿಂಗಳು ಏನು ಉಳಿಯುತ್ತಿತ್ತು. ಅದು ಯಾವುದೂ ಇಲ್ಲದ ಹಾಗೆ ಮಾಡಿದ್ದೇವೆ. ಈಗ ಕೇಂದ್ರಸರ್ಕಾರದ grant ಬರುವುದು ಸ್ವಲ್ಪ ನಿಧಾನವಾಗಿರುವುದರಿಂದ ಈ ಸಂದರ್ಭದಲ್ಲಿ 15 ದಿವಸಗಳು.. ಆಗಬಹುದು

ಅಧ್ಯಕ್ಷರು:– ಅವರಿಂದ ಬರುವುದು ನಿಧಾನವಾದರೆ ನಿಮ್ಮ ಹಣವನ್ನು ಕೊಡಿ, ಆನಂತರ ನಿಮ್ಮ ಹಣವನ್ನು reimburse ಮಾಡಿಕೊಳ್ಳಿ.

ಶ್ರೀ ಹೆಚ್.ಕೆ. ಪಾಟೀಲ್:– ನಾವು ಮಾಡುತ್ತೇವೆ. ಸಮಸ್ಯೆಯನ್ನು ತಕ್ಷಣ ಬಗೆಹರಿಸುತ್ತೇವೆ.

ಅಧ್ಯಕ್ಷರು:– ಇನ್ನೊಂದು ಸಲಹೆ ಏನೆಂದರೆ ಮಾನ್ಯ ಜಗದೀಶ್ ಕುಮಾರ್ ಅವರ ಪ್ರಶ್ನೆ ವಿಸ್ತಾರವಾಗಿದೆ. ನೀವು ಪ್ರತಿ ಜಿಲ್ಲೆಗಳಿಗೆ ಹೋಗಿ ಈ ಕಾರ್ಯಕ್ರಮಗಳ ಅನುಷ್ಠಾನ ವಿಚಾರದಲ್ಲಿ ಸ್ವಲ್ಪ Review ಮಾಡುವಂತಹ ಪ್ರಯತ್ನವನ್ನು ಮಾಡಿ.

ಪ್ರಶ್ನೆ ಸಂಖ್ಯೆ:509

(ಮಾನ್ಯ ಸದಸ್ಯರು ಹಾಜರಿರಲಿಲ್ಲ)